ತತ್ತ್ವಗಳನ್ನೂ, ಮೇಲೆ ಹೇಳಿಬಿಟ್ಟಿದ್ದಾರೆ. ಆದ್ದರಿಂದಲೇ ಅವರನ್ನು ಸ್ವಾಮಿ ಶಾರದಾನಂದರು **'ಸರ್ವಧರ್ಮ ಸ್ಥಾಪಕ'** ಎಂದು ಹಾಡಿಹೊಗಳಿದ್ದಾರೆ.

ಮನುಜಕುಲದ ಅರ್ಧಭಾಗವಾಗಿರುವ ಸ್ತ್ರೀಯರ ಉನ್ನತಿಯಿಂದಲೇ ಮಾನವನ ಉನ್ನತಿ ಎಂದು ಆಧುನಿಕರು ಹೇಳುತ್ತಿರುವುದನ್ನು, ಶ್ರೀರಾಮಕೃಷ್ಣರು ತಮ್ಮ ಜೀವನದಲ್ಲಿ ನಡೆದು ತೋರಿಸಿಕೊಟ್ಟಿದ್ದಾರೆ; ಸ್ತ್ರೀಯರ ಸಂಪೂರ್ಣ ಉನ್ನತಿಗಾಗಿ ದಾರಿ ತೋರಿಸಿದ್ದಾರೆ. ತಾವೇ ಸ್ತ್ರೀಯರಿಗೆ ಅತ್ಯಂತ ಗೌರವ ತೋರಿಸಿದ್ದಾರೆ! ಇಷ್ಟದೇವತೆಯಾಗಿ ಕಾಳಿಯನ್ನು ಆರಾಧಿಸಿದ್ದಾರೆ. ಭೈರವಿ ಬ್ರಾಹ್ಮಣಿಯನ್ನು ಗುರುವಾಗಿ ಸ್ವೀಕರಿಸಿದ್ದಾರೆ. ತಮ್ಮ ಪತ್ನಿಯಾದ ಶಾರದಾದೇವಿಯವರನ್ನು ಶಿಷ್ಯೆಯನ್ನಾಗಿ ಸ್ವೀಕರಿಸಿ ಅವರನ್ನೇ ದೇವಿ ರೂಪದಲ್ಲಿ ಪೂಜಿಸಿ, ತಮ್ಮ ಆಧ್ಯಾತ್ಮಿಕ ಉತ್ತರಾಧಿಕಾರಿಯನ್ನಾಗಿ ಬಿಟ್ಟುಹೋದದ್ದು, ಈ ಅವತಾರಪುರುಷರ ಅಪ್ರತಿಮ ಸಾಹಸದ ಕಾರ್ಯ. ಶ್ರೀಶಾರದಾದೇವಿಯವರು, "ಸ್ತ್ರೀಯರಿಗೆ ಲೌಕಿಕ ವಿದ್ಯಾಭ್ಯಾಸವೂ ಬೇಕು. ಅದರ ಜೊತೆಗೆ ಆಧ್ಯಾತ್ಮಿಕ ಜ್ಞಾನವೂ ಬೇಕು" ಎಂದು ಪದೇ ಪದೇ ಹೇಳುತ್ತಾ, ಭಕ್ತೆಯರ ಮೂಲಕ ಆ ಕೆಲಸವನ್ನು ಮಾಡಿಸಿದ್ದಾರೆ. ಇದಕ್ಕೆ ಅನುಗುಣವಾಗಿ ಸ್ತ್ರೀಯರ ಸಂನ್ಯಾಸಿನಿ ಸಂಘವು 'ಶಾರದಾಮಠ'ದ ಹೆಸರಿನಲ್ಲಿ ಸ್ಥಾಪಿತವಾಗಿ, ದಿನೇದಿನೇ ವಿಶ್ವದಲ್ಲೆಲ್ಲಾ ಹರಡುತ್ತಿರುವುದು ಶ್ರೀಶಾರದಾದೇವಿಯವರ ಅನುಗ್ರಹದಿಂದಲೇ ಎಂದರೆ ತಪ್ಪಾಗಲಾರದು. ಶ್ರೀಶಾರದಾದೇವಿಯವರ ಕೃಪೆಯೆಂದರೆ ಅದು ಶ್ರೀರಾಮಕೃಷ್ಣರ ಅನುಗ್ರಹವೇ ಆಗಿದೆ. ಶ್ರೀರಾಮಕೃಷ್ಣರ ಯುಗಧರ್ಮದ ಪರಿಣಾಮವೇ ಇದು.

ಧರ್ಮದ ಗುರಿ ಭಗವಂತನನ್ನು ಕಂಡು, ನಾವೂ ಅವನಂತಾಗುವುದೇ ಆಗಿದೆ. ಹಾಗಾದರೆ ಧರ್ಮದ ಹೆಸರಿನಲ್ಲಿ ಜಾತಿಭೇದ, ಲಿಂಗಭೇದ, ದೇಶಭೇದ – ಇವೆಲ್ಲಾ ಏತಕ್ಕೆ ಎಂಬ ಪ್ರಶ್ನೆ ಏಳಬಹುದು. ಶ್ರೀರಾಮಕೃಷ್ಣರು ಅವೆಲ್ಲಕ್ಕೂ ವ್ಯಾವಹಾರಿಕವಾಗಿ ಉತ್ತರ ನೀಡಿದ್ದಾರೆ. ಎಲ್ಲರಿಗೂ ಧರ್ಮದಲ್ಲಿ ಅರ್ಹತೆಯುಂಟು, ಅಧಿಕಾರವುಂಟು. ಎಲ್ಲಾ ಜಾತಿ, ಎಲ್ಲಾ ಬುಡಕಟ್ಟು, ಹೆಂಗಸರು ಮತ್ತು ಕಡುಪಾಪಿಗಳಿಗೂ ಧರ್ಮದ ಅನುಷ್ಠಾನದಲ್ಲಿ ಅರ್ಹತೆಯಿದೆ. ಶ್ರೀರಾಮಕೃಷ್ಣರ ಶಿಷ್ಯರಲ್ಲಿ ಎಲ್ಲಾ ಜಾತಿಯವರೂ, ಹೆಂಗಸರೂ, ವಿಭಿನ್ನ ಬುಡಕಟ್ಟಿನವರೂ ಇದ್ದಾರೆ. ಕಡುಪಾಪಿಗಳೂ ಕೂಡ ಅವರ ಅನುಗ್ರಹಕ್ಕೆ ಪಾತ್ರರಾಗಿ, ಪರಮಪಾವನರಾಗಿದ್ದಾರೆ. ಶ್ರೀರಾಮಕೃಷ್ಣರು ಇಡೀ ಸೃಷ್ಟಿಯನ್ನೇ 'ದೇವಮಯ'ವನ್ನಾಗಿ ಮಾಡಿಬಿಟ್ಟಿದ್ದಾರೆ. ಅವರು "ಪ್ರಾಕೃತಿಕ ನಿಯಮಗಳು ಜಡ ನಿಯಮಗಳಲ್ಲ, ಬರಿಯ ಯಾಂತ್ರಿಕ ನಿಯಮಗಳಲ್ಲ, ಅವುಗಳ ಹಿಂದೆ 'ಭಗವಂತ'ನ ಇಚ್ಛೆ ಇದೆ" ಎನ್ನುತ್ತಾರೆ. ಭಗವಂತನಲ್ಲಿ ಅಪಾರ ಭಕ್ತಿ, ಶ್ರದ್ಧೆಯುಳ್ಳವರಿಗೆ ಪ್ರಕೃತಿಯ ನಿಯಮಗಳೂ ಮಣಿಯುತ್ತವೆ ಎಂದು ತೋರಿಸಿಕೊಟ್ಟಿದ್ದಾರೆ. ಒಂದು ಬಾರಿ ಮಥುರಬಾಬು ಶ್ರೀರಾಮಕೃಷ್ಣರಿಗೆ ಹೀಗೆಂದ: "ಗುರುಗಳೇ, ಭಗವಂತನೂ ತನ್ನ ನಿಯಮಗಳನ್ನು ಉಲ್ಲಂಘಿಸಲಾರ. ಒಂದು ಕೆಂಪುಹೂವಿನ ಗಿಡದಲ್ಲಿ ಬೇರೆಯ ಬಣ್ಣದ ಹೂವನ್ನು ಸೃಷ್ಟಿಸಲಾರ." ತಕ್ಷಣವೇ ಶ್ರೀರಾಮಕೃಷ್ಣರೆಂದರು, "ಏಕೆ? ಅವನ ನಿಯಮಗಳನ್ನು ಅವನು ನಿಶ್ಚಯವಾಗಿ ಮಾರ್ಪಡಿಸಬಲ್ಲ." ಮರುದಿನ ಬೆಳಿಗ್ಗೆ ಒಂದು ಕೆಂಪು ದಾಸವಾಳದ ಗಿಡದ ಒಂದೇ ಕೊಂಬೆಯಲ್ಲಿ ಕೆಂಪು ಮತ್ತು ಬಿಳಿಯ ದಾಸವಾಳದ ಹೂವುಗಳನ್ನು ಅವರು ಕಂಡರು, ಅವನ್ನು ಹಾಗೆಯೇ ಕಿತ್ತು ಮಥುರಬಾಬುವಿಗೆ ತೋರಿಸಿ ಹೇಳಿದರು, "ಈಗ ಒಪ್ಪಿಕೊಳ್ಳುತ್ತೀಯೇನು? ಭಗವಂತ ಸರ್ವಶಕ್ತಿವಂತ ಎಂದು."


ಶ್ರೀರಾಮಕೃಷ್ಣರು ಉಪದೇಶಿಸಿದ್ದು ಕೇವಲ ಜ್ಞಾನವಲ್ಲ; ಅದು 'ವಿಜ್ಞಾನ'. ಇದು 'ಸಮಾಧಿ'ಗಿಂತ ಉಚ್ಚತರವಾದ ನೆಲೆ, ಅದೇ 'ಎಲ್ಲೆಲ್ಲೂ ಭಗವಂತನನ್ನು ಕಂಡು ಸೇವಿಸುವುದು.' ಇದರ ಪರಿಣಾಮವೇ 'ಶಿವಜ್ಞಾನದಲ್ಲಿ ಜೀವಸೇವೆ!' ಇದು ಆಧುನಿಕರಿಗೆ ಸಿಕ್ಕಿರುವ ಚಿಂತಾಮಣಿ ಮಂತ್ರ!. ಅವತಾರಪುರುಷನು ಅನಂತಶಕ್ತಿಯ ಭಂಡಾರವನ್ನು ತಂದು ಸುರಿದುಬಿಡುತ್ತಾನೆ. ಇದರ ಫಲವಾಗಿ ಸಮಾಜದಲ್ಲಿನ ಕೆಟ್ಟದ್ದು, ಜೊಳ್ಳು ಎಲ್ಲಾ ಕೊಚ್ಚಿಕೊಂಡು ಹೋಗಿ, ಜಗತ್ತಿನ ಜೀವನಪ್ರವಾಹಕ್ಕೆ ಒಂದು ಹೊಸ 'ಆಧ್ಯಾತ್ಮಿಕ ದಿಶೆ' ಪ್ರಾಪ್ತವಾಗುತ್ತದೆ. ಶ್ರೀರಾಮಕೃಷ್ಣರದ್ದು ಅಂಥ ಅನಂತಶಕ್ತಿ. ಈಗಲೂ ಅವರು ತಮ್ಮ ಭಕ್ತರ ಹಿಂದೆ ಇದ್ದು, ಅವರ ಉನ್ನತಿಯನ್ನು ಮಾಡಿಸುತ್ತಿದ್ದಾರೆ. ಗಿರೀಶ್‌ನಂತಹ ಕಡುಪಾಪಿಯೂ ಪರಮಸಂತನಾಗಿ ಬಿಡುತ್ತಾನೆ. ಪತಿತರನ್ನು ಉದ್ಧಾರ ಮಾಡುವುದಕ್ಕಾಗಿ ಬಂದ ಅವತಾರಪುರುಷರು ಶ್ರೀರಾಮಕೃಷ್ಣರು ಎಂದು ಭಕ್ತಾಗ್ರೇಸರನಾದ ಗಿರೀಶ್‌ಚಂದ್ರ ಘೋಷ್ ಎಲ್ಲರಿಗೂ ಸಾರಿದನು. ಅವನು ಹಲವು ನಾಟಕಗಳನ್ನು ಬರೆದು, ಸ್ವತಃ ಯಶಸ್ವಿಯಾಗಿ ನಟಿಸಿ, ವಂಗದೇಶದಲ್ಲೆಲ್ಲಾ ಸುಪ್ರಸಿದ್ಧನಾಗಿದ್ದ. ಆದರೇನು? ಅವನು ಕುಡುಕ, ಸ್ತ್ರೀಲಂಪಟನಾಗಿದ್ದ. ಇಂಥವನು ಶ್ರೀರಾಮಕೃಷ್ಣರಲ್ಲಿ ಶರಣುಹೋದ, ಅವರ ಅಪಾರಕರುಣೆಯಿಂದ ಅವನಲ್ಲಿದ್ದ ಕೆಟ್ಟ ಅಭ್ಯಾಸಗಳೆಲ್ಲಾ ಬಿಟ್ಟುಹೋದವು. ಒಂದು ಸಾರಿ ಅವನೇ ಹೇಳಿಕೊಂಡ, "ಗಂಗೆ ಕೂಡ ನನ್ನ ಪಾಪಗಳನ್ನು ಕಳೆಯಲಾರಳು" ಎಂದು. ಅಂಥವನು ತನ್ನ ಜೀವಿತದ ಕೊನೆಯಲ್ಲಿ ಪ್ರತಿದಿನ ಗಂಗಾಸ್ನಾನ ಮಾಡುತ್ತಿದ್ದುದನ್ನು ನೋಡಿ ಭಕ್ತರು, "ಮುಂಚೆ ನಿನಗೆ ಗಂಗಾಸ್ನಾನದಲ್ಲಿ ನಂಬಿಕೆಯೇ ಇರಲಿಲ್ಲ. ಈಗ ಏನಾಯ್ತು, ಪ್ರತಿದಿನ ಗಂಗೆಗೆ ಸ್ನಾನಕ್ಕಾಗಿ ಬರುತ್ತಿದ್ದೀಯೆ?"ಎಂದು ಕೇಳುತ್ತಾರೆ. ಇದಕ್ಕೆ ಉತ್ತರವಾಗಿ ಗಿರೀಶ್, "ಹೌದು, ಪ್ರತಿದಿನವೂ ಗಂಗೆಯಲ್ಲಿ ಮುಳುಗಿ ಎದ್ದು ಗಂಗೆಗೆ ಹೇಳುತ್ತೇನೆ, 'ಅಮ್ಮಾ ನನ್ನ ಪಾಪವನ್ನು ತೆಗೆದುಕೋ ಎಂದು ನಾನು ಬಂದಿಲ್ಲ, ಏಕೆಂದರೆ ಅವೆಲ್ಲವನ್ನೂ ಶ್ರೀರಾಮಕೃಷ್ಣರು ತೊಡೆದುಹಾಕಿಬಿಟ್ಟಿದ್ದಾರೆ. ಅವರು ಈ ಮೈಯಲ್ಲಿ ತುಂಬಿರುವ ಪವಿತ್ರತೆಯನ್ನು ನಿನಗೆ ಕೊಡಲು ನಾನು ಬರುತ್ತಿದ್ದೇನೆ!' " ಎಂದು ಉತ್ತರ ಕೊಟ್ಟನು. ನೋಡಿ, ಎಂತಹ ಕಡುಪಾಪಿಯನ್ನೂ ಶ್ರೀರಾಮಕೃಷ್ಣರು ಎಂಥ ಸಂತನನ್ನಾಗಿಸಿಬಿಟ್ಟರು! ಇನ್ನು ನಮಗೇಕೆ ಅಳುಕು, ಅಂಜಿಕೆ ಅಥವಾ ಭಯ! ಬನ್ನಿ, ಶ್ರೀರಾಮಕೃಷ್ಣರನ್ನು ಅನುಸರಿಸಿ ಧನ್ಯರಾಗೋಣ. ▸

# ಶ್ರೀರಾಮಕೃಷ್ಣರ ಅನುಪಮ ಸಂದೇಶಗಳು – ಈಗಿನ ಶಿಕ್ಷಣ ಪದ್ಧತಿಗೆ ಅವುಗಳ ಪ್ರಸ್ತುತತೆ

ಸ್ವಾಮಿ ಭಜನಾನಂದ

ಮಹಾಪುರುಷರು ಜಗತ್ತಿಗೆ ನೀಡುವ ಸಂದೇಶಗಳು, ಅವರು ನಡೆಸಿದ ಜೀವನ – ಇವೆರಡೂ ಅವಿಭಾಜ್ಯ ಅಂಗವಾಗಿರುತ್ತವೆ. ಶ್ರೀರಾಮಕೃಷ್ಣರ ವಿಷಯದಲ್ಲೂ ಅಷ್ಟೇ; ಅವರ ಜೀವನ ಮತ್ತು ಅವರು ನೀಡಿದ ಸಂದೇಶಗಳು ಅನನ್ಯವಾಗಿವೆ.

ಬಾಲಕರಾಗಿದ್ದಾಗಿನಿಂದಲೂ, ಶ್ರೀರಾಮಕೃಷ್ಣರು ಭಗವಂತನ ಸಾಕ್ಷಾತ್ಕಾರಕ್ಕಾಗಿ ತೀವ್ರವಾಗಿ ಹಂಬಲಿಸುತ್ತಿದ್ದರು. ಅವರ ಶಾಲಾ ವಿದ್ಯಾಭ್ಯಾಸವು ಕೇವಲ ಎರಡು ಅಥವಾ ಮೂರು ವರ್ಷಗಳಿಗೆ ಸೀಮಿತಗೊಂಡಿತ್ತು. ಕೌಟುಂಬಿಕ ಬಡತನದಿಂದಾಗಿ ಅವರು ತಮ್ಮ ಹತ್ತೊಂಬತ್ತನೇ ವಯಸ್ಸಿಗೆ, ಕೊಲ್ಕತಾದ ಹತ್ತಿರದ ದಕ್ಷಿಣೇಶ್ವರದಲ್ಲಿ ಹೊಸದಾಗಿ ನಿರ್ಮಿತವಾಗಿದ್ದ ಕಾಳೀ ಮಂದಿರದಲ್ಲಿ ಅರ್ಚಕವೃತ್ತಿಯನ್ನು ಅಂಗೀಕರಿಸಬೇಕಾಯಿತು. ಆದರೆ ಅವರು ತೀವ್ರ ಆಧ್ಯಾತ್ಮಿಕ ಸಾಧನೆಗಳಲ್ಲಿ ಮಗ್ನರಾಗಿದ್ದುದರಿಂದ, ಅರ್ಚಕವೃತ್ತಿಯನ್ನು ಬಹಳ ಕಾಲ ಮುಂದುವರೆಸಲಾಗಲಿಲ್ಲ. ಅವರು ಸುಮಾರು ಹನ್ನೆರಡು ವರ್ಷಗಳ ಕಾಲ ಹಿಂದೂಧರ್ಮವಲ್ಲದೆ, ಇತರೆ ಧರ್ಮಗಳಲ್ಲೂ ಹೇಳಿರುವ ಆಧ್ಯಾತ್ಮಿಕ ಮಾರ್ಗಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಮಹಾನ್ ಸಾಧನೆ ಮಾಡಿದರು. ಶ್ರೀರಾಮಕೃಷ್ಣರು ಎಲ್ಲ ಆಧ್ಯಾತ್ಮಿಕ ಅನುಭವಗಳಿಂದ ಕೆಳಕಂಡ ಪ್ರಮುಖ ನಿರ್ಧಾರಗಳಿಗೆ ಬಂದರು. ಇವೇ ಅವರ ಸಂದೇಶಗಳ ತಿರುಳಾಗಿವೆ:



**೧. ಮಾನವ ಜೀವನದ ಅಂತಿಮ ಗುರಿ, ಅಂತಿಮ ಸತ್ಯವನ್ನು ಅರಿಯುವುದಾಗಿರಬೇಕು. ಏಕೆಂದರೆ ಅದು ಮಾತ್ರವೇ ಶಾಶ್ವತವಾದ ಪರಮ ಶಾಂತಿಯನ್ನೂ, ಪೂರ್ಣಸಫಲತೆಯನ್ನೂ ಮಾನವಜೀವನಕ್ಕೆ ತಂದುಕೊಡುತ್ತದೆ.**

**೨. ಜಗತ್ತಿನ ಎಲ್ಲ ಧರ್ಮಗಳೂ ಅಂತಿಮ ಸತ್ಯವನ್ನು ಮುಟ್ಟಲು ಭಿನ್ನ ಭಿನ್ನ ಮಾರ್ಗಗಳಾಗಿವೆ. ಈ ಸತ್ಯವೇ ವಿವಿಧ ಧರ್ಮಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಟ್ಟಿದೆ.**

**೩. ಭಗವಂತನು ಎಲ್ಲರ ಹೃದಯದಲ್ಲಿಯೂ ಇರುವನು. ಆದ್ದರಿಂದ ಮಾನವ ಸೇವೆಯೇ ಭಗವಂತನ ಸೇವೆಯಾಗುತ್ತದೆ.**

ಸಾಧನೆಯ ತರುವಾಯ ಬಹುಬೇಗ ಶ್ರೀರಾಮಕೃಷ್ಣರತ್ತ ಶಿಷ್ಯರು ಬರಲಾರಂಭಿಸಿದರು. ಅವರಲ್ಲಿ ಪ್ರಮುಖರಾದವರೆಂದರೆ ನರೇಂದ್ರನಾಥ ದತ್ತ. ಇವರೇ ಮುಂದೆ ಸ್ವಾಮಿ ವಿವೇಕಾನಂದರಾದರು; ಶ್ರೀರಾಮಕೃಷ್ಣರ ಮಹಾಸಮಾಧಿಯಾದ ಮೇಲೆ ಅವರ ಯುವಕಶಿಷ್ಯರು ಸಂನ್ಯಾಸಿಗಳಿಗಾಗಿ 'ರಾಮಕೃಷ್ಣ ಮಠ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಕೇಂದ್ರ ಕಾರ್ಯಾಲಯ ಕೊಲ್ಕತಾ ಬಳಿಯಿರುವ ಬೇಲೂರುಮಠದಲ್ಲಿದೆ. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಸಂದೇಶಗಳನ್ನು ದೂರದೂರದ ದೇಶಗಳಲ್ಲಿ ಬಿತ್ತರಿಸಿದರು. ಭಾರತದ ಮತ್ತು ಜಗತ್ತಿನ ವಿವಿಧ ಭಾಗಗಳಲ್ಲಿ ಸಂಕಷ್ಟದಲ್ಲಿ ಸಿಲುಕಿರುವ ಜನಗಳಿಗಾಗಿ, ಅದರಲ್ಲೂ ಬಡವರಿಗಾಗಿ, ಕೆಳವರ್ಗದವರಿಗಾಗಿ ಆರ್ಥಿಕ, ಶೈಕ್ಷಣಿಕ, ವೈದ್ಯಕೀಯ ಮತ್ತು ಸಾಮಾಜಿಕ ಸೇವೆಯನ್ನು ಸಲ್ಲಿಸಲು ಹಾಗೂ ಆಧ್ಯಾತ್ಮಿಕ ಮಾರ್ಗದರ್ಶನವನ್ನು ನೀಡಲು 'ರಾಮಕೃಷ್ಣ ಮಿಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

**ಇಂದಿನ ಶಿಕ್ಷಣ ಪದ್ಧತಿ ನಿಸ್ಸಾರವಾಗಿದೆ, ನಿರ್ಜೀವವಾಗಿದೆ. ಶ್ರೀರಾಮಕೃಷ್ಣರ ಬೋಧನೆಗಳ ಪರಿಚಯವು ಇದನ್ನು ಗುಣಾತ್ಮಕವನ್ನಾಗಿಯೂ, ಜೀವನಮುಖಿಯನ್ನಾಗಿಯೂ ಮಾಡಬಲ್ಲುದು. ಈ ಅಂಶವನ್ನು ಪಾಂಡಿತ್ಯಪೂರ್ಣವಾಗಿ ವಿಶ್ಲೇಷಿಸಿರುವ ಸ್ವಾಮೀಜಿಯವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹಕಾರ್ಯದರ್ಶಿಗಳಲ್ಲಿ ಒಬ್ಬರು. ಹಿರಿಯ ವಿದ್ವಾಂಸರಾದ ಸ್ವಾಮೀಜಿಯವರು ಅನುಭಾವ ಸಾಹಿತ್ಯದಲ್ಲಿ ನುರಿತವರಾಗಿದ್ದಾರೆ. ಪಾಶ್ಚಾತ್ಯ ಮತ್ತು ಪೌರಸ್ತ್ಯ ಚಿಂತನೆಗಳಲ್ಲಿ ಪರಿಣತರಾಗಿದ್ದಾರೆ. ಪ್ರಸ್ತುತ ಲೇಖನವು ಪೂಜ್ಯ ಸ್ವಾಮೀಜಿಯವರು 'ಆಧುನಿಕ ಪ್ರಪಂಚಕ್ಕೆ ಶ್ರೀರಾಮಕೃಷ್ಣರ ವಿಶಿಷ್ಟ ಸಂದೇಶ' ಎಂಬ ವಿಷಯವಾಗಿ ಬೇಲೂರುಮಠದ ಸಮೀಪವಿರುವ ಶಾರದಾ ಪೀಠದ ಬಿ.ಎಡ್. ಕಾಲೇಜಿನಲ್ಲಿ ನಡೆದ ವಿಚಾರಸಂಕಿರಣದಲ್ಲಿ ಮಾಡಿದ ಭಾಷಣದ ರೂಪಾಂತರ. ಅನುವಾದ: ಎನ್.ಪ್ರಭಾಕರ**

ಈ ಅವಳಿಸಂಸ್ಥೆಗಳಲ್ಲಿ ಮತ್ತು ಅವುಗಳ ಶಾಖಾಕೇಂದ್ರಗಳಲ್ಲಿ ಶ್ರೀರಾಮಕೃಷ್ಣರ ಜೀವನವು ಒಂದು ಜೀವಂತ ಪರಂಪರೆಯಾಗಿದೆ. ಈ ಕೇಂದ್ರಗಳ ಹಾಗೂ ಇನ್ನಿತರ ಮಾಧ್ಯಮಗಳ ಮೂಲಕ ಶ್ರೀರಾಮಕೃಷ್ಣರ ಅನುಪಮ ಸಂದೇಶಗಳು ಭಾರತ ಹಾಗೂ ಜಗತ್ತಿನೆಲ್ಲೆಡೆ ಪ್ರಸಾರವಾಗುತ್ತಿವೆ. ಈ ಸಂದೇಶಗಳು, ಯಾವುದೇ ಅಬ್ಬರದ ಪ್ರಚಾರವಿಲ್ಲದೆ, ಮೌನವಾಗಿ, ಜನಸಮುದಾಯಗಳಲ್ಲಿ ಪರಿವರ್ತನೆ ತರುತ್ತಿರುವುದನ್ನು ಕಾಣಬಹುದು.

ಪ್ರಸ್ತುತದಲ್ಲಿ ಪ್ರಶ್ನೆಯೊಂದು ಏಳುವುದು: ಶ್ರೀರಾಮಕೃಷ್ಣರ ಸಂದೇಶಗಳು ಶಿಕ್ಷಕರ ತರಬೇತಿ ಕಾಲೇಜು ಏರ್ಪಡಿಸಿರುವ ಈ ವಿಚಾರ ವಿನಿಮಯ ಸಮ್ಮೇಳನಕ್ಕೆ ಎಷ್ಟರಮಟ್ಟಿಗೆ ಪ್ರಸ್ತುತವಾಗಿದೆ? ನವಯುವಕರಾದ ವಿದ್ಯಾರ್ಥಿಗಳಿಗೆ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳು ಏನನ್ನು ತಿಳಿಸುತ್ತವೆ?

**ಬದುಕಿನಿಂದ ಶಿಕ್ಷಣ:** ಶ್ರೀರಾಮಕೃಷ್ಣರ ಶಾಲಾ ಶಿಕ್ಷಣವು ಮೂರನೆಯ ಶ್ರೇಣಿಗಿಂತ ಮುಂದೆ ಸಾಗದೆ ಇದ್ದುದು ನಿಜ. ಆದರೆ ಅವರು ಅತಿ ಶ್ರೇಷ್ಠ ಶಾಲೆಯಲ್ಲಿ ಶಿಕ್ಷಣ ಪಡೆದುಕೊಂಡರು. **ಅದುವೆ ಜೀವನ!** ಎಲ್ಲ ಜ್ಞಾನವೂ ಬದುಕಿನಿಂದ ಬರುತ್ತದೆ. ಬದುಕೇ ಅತ್ಯುತ್ತಮ ಶಿಕ್ಷಕ. ಈಗಿರುವ ಶಿಕ್ಷಣದ ವ್ಯವಸ್ಥೆಯ ಕೊರತೆ ಎಂದರೆ, ಅದು ವಿದ್ಯಾರ್ಥಿಗಳನ್ನು ಬದುಕಿನಿಂದ ವಿಮುಖಗೊಳಿಸುತ್ತಿದೆ. ಅವರನ್ನು ವಾಸ್ತವಿಕ ಜೀವನದಲ್ಲಿ ಪಾಲ್ಗೊಳ್ಳದಂತೆ ತಡೆದು ಜ್ಞಾನವನ್ನು ಸ್ವೀಕರಿಸದಂತೆ ಮಾಡುತ್ತಿದೆ. ಈ ಸಂದರ್ಭದಲ್ಲಿ ನಾನು ನಿಕೊಸ್ ಕಜ಼ನ್‌ಜಕೀಸ್‌ರವರ 'ರಿಪೋರ್ಟ್ ಆಫ್ ಗ್ರೇಕೊ' (Report Of Greco) ಪುಸ್ತಕದ ಕೆಲವು ವಾಕ್ಯಗಳನ್ನು ಉದಹರಿಸಲು ಇಚ್ಛಿಸುತ್ತೇನೆ. ಆ ಗ್ರಂಥಕರ್ತರು ಗ್ರೀಕ್ ದೇಶದ ವಿಖ್ಯಾತ ಬರಹಗಾರರು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ 'ನೊಬೆಲ್ ಪಾರಿತೋಷಕ'ವನ್ನು ಪಡೆದ ಪ್ರತಿಭಾವಂತರು.

ಆ ಪುಸ್ತಕದಲ್ಲಿರುವ ಈ ಕೆಳಗಿನ ಕೆಲವು ವಾಕ್ಯಗಳು, ಯಾವುದೋ ಪಟ್ಟಣದ ಒಂದು ಶಾಲೆಯನ್ನು ವಿವರಿಸುತ್ತವೆ. ಶಿಕ್ಷಕರೊಬ್ಬರು ಮೂರನೆಯ ತರಗತಿಗೆ ವ್ಯಾಕರಣವನ್ನು ಬೋಧಿಸುತ್ತಿರುತ್ತಾರೆ: "ಶಿಕ್ಷಕರು ವ್ಯಾಕರಣದ ಸೂತ್ರಗಳನ್ನು ಪುನರುಚ್ಚರಿಸಿ ಅವು ನಮ್ಮ ಮನಸ್ಸಿನೊಳಗೆ ಇಳಿದು ಸ್ಥಿರವಾಗಿ ನಿಲ್ಲಲು ಪಡುತ್ತಿರುವ ಕಷ್ಟವನ್ನು ನಾವು ವೀಕ್ಷಿಸುತ್ತಿದ್ದೆವು. ಆದರೆ ನಮ್ಮ ಮನಸ್ಸು ಹೊರಗಡೆ ಸೂರ್ಯನ ಕಿರಣಗಳು ಬೆಣಚುಕಲ್ಲಿನ ಮೇಲೆ ಆಟವಾಡುತ್ತಿದ್ದುದನ್ನೇ ಗಮನಿಸುತ್ತಿತ್ತು...... ಒಂದು ವಸಂತ ಋತುವಿನ ಶುಭದಿನ ದಂದು ತರಗತಿಯ ಕಿಟಕಿಗಳು ತೆರೆದಿದ್ದವು. ಎದುರಿನ ರಸ್ತೆಯಲ್ಲಿದ್ದ ಮರವೊಂದರಲ್ಲಿ ಸುವಾಸನೆಯ ಹೂವುಗಳು ಅರಳಿ ನಳನಳಿಸು ತ್ತಿದ್ದವು. ಆ ಹೂವುಗಳ ಪರಿಮಳ ತರಗತಿಗೂ ತೇಲಿಬಂತು. ನಮ್ಮೆಲ್ಲರ ಮನಸ್ಸಿನಲ್ಲಿ ನಾವೇ ಆ ಪರಿಮಳಭರಿತ ಮರವಾಗಿದ್ದೇವೆಂದು ಭಾಸವಾಯಿತು. ನಾವೆಲ್ಲರೂ ಶಿಕ್ಷಕರು ಹೇಳುತ್ತಿದ್ದ ಸಂಕೀರ್ಣವಾದ ಮತ್ತು ಒತ್ತುಕೊಟ್ಟು ಉಚ್ಚರಿಸಬೇಕಾದ ಪದಗಳ ಉಚ್ಚಾರಣೆಯ ಪಾಠವನ್ನು ಕೇಳಲು ಸಿದ್ಧರಿರಲಿಲ್ಲ. ಒಂದು ಹಕ್ಕಿಯೊಂದು ಹಠಾತ್ತಾಗಿ ಬಂದು ಶಾಲೆಯ ಆವರಣದಲ್ಲಿದ್ದ ಅಷ್ಟೊಂದು ಅಂದವಾಗಿರದ ಮರದಲ್ಲಿ ಕುಳಿತು, ತನ್ನ ಸುಮಧುರ ಗಾನವನ್ನು ಆರಂಭಿಸಿತು. ಆ ಸಮಯದಲ್ಲಿ, ಆ ವರ್ಷವೇ ತನ್ನ ಗ್ರಾಮದಿಂದ ಬಂದಿದ್ದ, ನಸುಗೆಂಪು ತಲೆಯ ನಿಕೊಲಿಯೊಸ್ ಎಂಬ ವಿದ್ಯಾರ್ಥಿಯು, ತನ್ನ ಭಾವನೆಗಳನ್ನು ಹಿಡಿದಿಟ್ಟುಕೊಳ್ಳಲಾರದೆ ತನ್ನ ಕೈಬೆರಳುಗಳನ್ನು ಎತ್ತಿ, 'ಕೊಂಚ ಸುಮ್ಮನಿರಿ, ಸರ್' ಎಂದು ಚೀರಿದನು, 'ಎಲ್ಲರೂ ಶಾಂತವಾಗಿದ್ದು, ಆ ಹಕ್ಕಿಯ ಗಾನವನ್ನು ಕೇಳೋಣ' ಎಂದನು."

ಮಕ್ಕಳು ಪ್ರಕೃತಿಯ ಸನಿಹದಲ್ಲಿ ಇರಲು ಉತ್ಕಟರಾಗಿರುತ್ತಾರೆ ಎಂಬುದು ಸತ್ಯ. ೧೮ ನೆಯ ಶತಮಾನದ ತತ್ತ್ವಜ್ಞಾನಿ, ಶಿಕ್ಷಣತಜ್ಞ ಜೀನ್ ಜಾಕಿ ರೂಸೊ ತನ್ನ ಖ್ಯಾತ ಗ್ರಂಥ 'ಎಮಿಲಿ'ಯಲ್ಲಿ ಹೇಳಿರುವುದನ್ನು ಗಮನಿಸೋಣ. ಆತ ಹೇಳುತ್ತಾನೆ, "ಮಕ್ಕಳನ್ನು ತಮ್ಮ ಪಾಡಿಗೆ ತಾವೇ ಇರುವುದಕ್ಕೆ ಬಿಟ್ಟರೆ, ಮಿತವಾದ ಮಾರ್ಗದರ್ಶನ ನೀಡಿದರೆ, ಅವರು ಪ್ರಕೃತಿಯಿಂದ ಅನೇಕ ಪಾಠಗಳನ್ನು ಕಲಿತು ಕೊಳ್ಳುವುದನ್ನು ನೋಡಬಹುದು. ಜೊತೆಜೊತೆಗೆ ಅವರು ನೀತಿವಂತರಾಗುವುದನ್ನೂ ಕಾಣಬಹುದು." ಈ ಮಾತುಗಳ ನಿಜವಾದ ಅರ್ಥವನ್ನು ಶ್ರೀರಾಮಕೃಷ್ಣರ ಜೀವನದಲ್ಲಿ ನೋಡಬಹುದು. ಅವರು ತಮ್ಮ ಬಾಲ್ಯವನ್ನು ಪ್ರಕೃತಿಯೊಂದಿಗೆ ಕಳೆದರು. ಪ್ರೌಢರಾಗುತ್ತಿದ್ದಂತೆ ಮಾನವಜೀವನದ ಜಟಿಲತೆಯನ್ನು, ಅನಿತ್ಯತೆಯನ್ನು ಗಮನಿಸತೊಡಗಿದರು. ಈ ಸಹಜ ಕ್ರಿಯೆಯಿಂದ ಅವರು ಹೇರಳ ಜ್ಞಾನವನ್ನೂ, ವಿವೇಕವನ್ನೂ ಕಲಿತರು. ಅವರ ಈ ಜ್ಞಾನಾಮೃತ, 'ಶ್ರೀರಾಮಕೃಷ್ಣ ವಚನವೇದ'ದಲ್ಲಿ ಅಡಕವಾಗಿದೆ. ಶ್ರೀರಾಮಕೃಷ್ಣ ವಚನವೇದವು ಕಳೆದ ನೂರು ವರ್ಷಗಳಿಂದಲೂ ಲಕ್ಷಾಂತರ ಭಕ್ತರಿಗೆ ಆಧ್ಯಾತ್ಮಿಕ ಮಾರ್ಗದರ್ಶನವನ್ನೂ, ಸ್ಫೂರ್ತಿಯನ್ನು ನೀಡುತ್ತಿದೆ.

ರೂಸೋವಿನ ಅಭಿಪ್ರಾಯದಂತೆ ಈಗಿನ ಶಿಕ್ಷಣ ವ್ಯವಸ್ಥೆಯು, ಮಕ್ಕಳು ಬದುಕಿನಿಂದ ನೇರ ಅನುಭವ ಪಡೆಯಲು ಮತ್ತು ಪ್ರಜ್ಞಾವಂತರಾಗಲು ಅಡ್ಡಿ ಮಾಡುತ್ತದೆ. ವಿದ್ಯಾರ್ಥಿಯು ಸ್ಪರ್ಧೆಯನ್ನು ಎದುರಿಸಿ ಧನಾರ್ಜನೆ ಮಾಡುವುದಕ್ಕಾಗಿಯೇ ಈಗಿನ ಶಿಕ್ಷಣ ವ್ಯವಸ್ಥೆಯು ರಚಿತವಾಗಿದೆ. ಶ್ರೀರಾಮಕೃಷ್ಣರು, 'ಅಕ್ಕಿ–ಬಾಳೆಹಣ್ಣನ್ನು' ಗಂಟುಕಟ್ಟುವಲ್ಲಿ ಮಾತ್ರ ನೆರವಾಗುವ ವಿದ್ಯೆಯನ್ನು ಕಲಿಸುವ ಶಾಲೆಗೆ ಹೋಗಲು ಏಕೆ ನಿರಾಕರಿಸಿದರೆಂಬುದು ಈ ಹಿನ್ನೆಲೆಯಲ್ಲಿ ನಮಗೆ ಚೆನ್ನಾಗಿಯೇ ಅರ್ಥವಾಗುತ್ತದೆ.

ಶ್ರೀರಾಮಕೃಷ್ಣರಿಗೆ ಶಿಕ್ಷಣವು ಜೀವನವಿಡೀ ನಡೆಯುವ ಒಂದು ಪ್ರಕ್ರಿಯೆಯಾಗಿತ್ತು. ಅವರೇ ಹೇಳುತ್ತಿದ್ದರು, "ನನ್ನ ಕೊನೆಯ ಉಸಿರಿರುವ ತನಕವೂ, ನಾನು ಕಲಿಯುತ್ತಲೇ ಇರುತ್ತೇನೆ." ಆಶ್ಚರ್ಯದ ವಿಚಾರವೆಂದರೆ ಶ್ರೀರಾಮಕೃಷ್ಣರ ಈ ದೃಷ್ಟಿಕೋನವು

ಶಿಕ್ಷಣದ ಇತ್ತೀಚಿನ ಆಲೋಚನೆಗಳಿಗೆ ತಾಳೆಯಾಗುತ್ತದೆ. ಫೌರ್ (Faure) ಆಯೋಗ ೧೯೭೨ರಲ್ಲಿ ಮತ್ತು ಡೆಲೋರ್ಸ್ (Delors) ಆಯೋಗ ೧೯೯೬ರಲ್ಲಿ ಯುನೆಸ್ಕೊಗೆ ಸಲ್ಲಿಸಿದ ವರದಿಗಳು, ಜೀವನಪರ್ಯಂತ ಕಲಿಯುತ್ತಲೇ ಇರುವ ವ್ಯವಸ್ಥೆಗೇ ಹೆಚ್ಚು ಮಹತ್ವವನ್ನು ನೀಡುತ್ತವೆ. "ಬದುಕಿರುವವರೆಗೂ ಅರಿಯುತ್ತಲೇ ಇರಲು ಅವಿರತವಾಗಿ ವಿಕಸಿತವಾಗುತ್ತಿರುವ ಜ್ಞಾನಸಂಪತ್ತನ್ನು ಹೇಗೆ ರೂಪಿಸಬೇಕು? ಅದು ಸ್ವಪ್ರಜ್ಞೆಯ ಶಿಕ್ಷಣದಿಂದ ಮಾತ್ರ ಸಾಧ್ಯ" ಎಂದು ಹೇಳುತ್ತವೆ. ಇದು ನಮ್ಮನ್ನು ಶ್ರೀರಾಮಕೃಷ್ಣರ ಇನ್ನೊಂದು ಸಂದೇಶಕ್ಕೆ ಕರೆದೊಯ್ಯುವುದು.

**ಸ್ವಪ್ರಜ್ಞೆಯ ಶಿಕ್ಷಣ:** ಒಬ್ಬ ವ್ಯಕ್ತಿಯು ಬದುಕಿನಿಂದ ಪಾಠ ಕಲಿಯಬೇಕಾದರೆ, ಮೊಟ್ಟಮೊದಲು ಜೀವನದ ಬಗ್ಗೆ ಒಂದು ಸೂಕ್ತ ಮನೋಭಾವವನ್ನು ಹೊಂದಿರಬೇಕಾಗುವುದು. ಬದುಕಿನ ಬಗ್ಗೆ ಮೂರು ಮನೋಭಾವಗಳಿವೆ, '**ಪಡೆದುಕೊಳ್ಳುವುದು, ನೀಡುವುದು, ತನ್ನಲ್ಲಿ ತಾನಿರುವುದು** (to have, to give, to be).'

ಮೊದಲನೆಯ ಭಾವ ಎಂದರೆ **ಬದುಕಿನಿಂದ, ಕೈಲಾದಷ್ಟು ವಿಷಯವಸ್ತುಗಳನ್ನು ಸಂಗ್ರಹಿಸಿಕೊಳ್ಳುವುದು.** ಇದು ಸ್ವ-ಕೇಂದ್ರೀಕೃತ ಭಾವ. ಇದು ಪ್ರೀತಿಯನ್ನೂ ಸಹ ಒಂದು ಗಳಿಸುವ ಸಾಮಗ್ರಿಯನ್ನಾಗಿ ಮಾಡುತ್ತದೆ. ದೌರ್ಭಾಗ್ಯವೆಂದರೆ ಈಗಿನ ಶಿಕ್ಷಣಪದ್ಧತಿಯು ಈ ಮನೋಭಾವವನ್ನೇ ಪ್ರೋತ್ಸಾಹಿಸುತ್ತಿದೆ.

ಎರಡನೆಯ ಭಾವ ಎಂದರೆ **ಇತರರಿಗೆ ನೀಡುವುದು, ಸಹಾಯ ಮಾಡುವುದು, ಸೇವೆ ಮಾಡುವುದು.** ಇದು ಸ್ವಹಿತತ್ಯಾಗದ ಬುನಾದಿಯ ಮೇಲೆ ಇದ್ದರೆ, ದಿಟವಾಗಿಯೂ ಉದಾತ್ತಭಾವವೇ ಸರಿ; ಈ ಭಾವವೇ ಎಲ್ಲ ಕುಟುಂಬಗಳನ್ನು, ಸಾಮಾಜಿಕ ಬಾಂಧವ್ಯಗಳನ್ನೂ ಹಿಡಿದಿಟ್ಟಿರುವುದು. ಈ ಮನೋಭಾವವನ್ನು ಬೆಳೆಸುವ ಗುರಿಯೂ ಶಿಕ್ಷಣದ ಗುರಿಗಳಲ್ಲಿ ಒಂದಾಗಿರಬೇಕು.

ಆದರೆ ಕೇವಲ ನೀಡುವಿಕೆಯೇ ಜೀವನವನ್ನು ಅರ್ಥಪೂರ್ಣವಾಗಿಸಲು ಸಾಲದು. ಕೇವಲ ಗಳಿಸುವುದು ಮತ್ತು ನೀಡುವುದು, ಒಬ್ಬ ಮನುಷ್ಯನನ್ನು ತನ್ನದೇ ಆದ ನೈಜ ಅಸ್ತಿತ್ವ, ನೈಜ ಆತ್ಮ, ನೈಜ ಸ್ವಭಾವಗಳಿಂದ ವಿಮುಖಗೊಳಿಸಬಹುದು. ಯಾವಾಗ ಒಬ್ಬ ವ್ಯಕ್ತಿಯು ತನ್ನ ಸ್ವಂತ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆಯೋ, ಆಗ ಅವನ ಬದುಕು ಅನಧಿಕೃತವಾಗುತ್ತದೆ, ಅಸತ್ಯವಾಗುತ್ತದೆ. ಅಂತಹ ವ್ಯಕ್ತಿಯು ಇತರರೊಡನೆ ಅರ್ಥಪೂರ್ಣ ಸಂಬಂಧಗಳನ್ನು ಇಟ್ಟುಕೊಳ್ಳಲು ಅಶಕ್ತನಾಗುತ್ತಾನೆ. ಅಲ್ಲದೆ ಬದುಕಿನ ನಿಜವಾದ ಅರ್ಥವನ್ನು ಕಂಡುಕೊಳ್ಳಲು ವಿಫಲನಾಗುತ್ತಾನೆ.

ಯುವಕರಿಗೆ ತಮ್ಮ ಸ್ವಂತ ಅಸ್ತಿತ್ವ ಮತ್ತು ನೈಜ ಸ್ವಭಾವಗಳನ್ನು ತಿಳಿಯುವ ಮತ್ತು ಯಥಾರ್ಥವಾಗಿ ತಾವು ಏನಾಗಿದ್ದೇವೆಯೋ ಅದನ್ನು ಅರಿಯುವ ಉದ್ದೇಶ ಕೂಡ ಶಿಕ್ಷಣದ ಪ್ರಧಾನ ಗುರಿಗಳಲ್ಲಿ ಒಂದಾಗಿರಬೇಕು. ಫೌರ್ (Faure) ಆಯೋಗವು ೧೯೭೨ರಲ್ಲಿ ಯುನೆಸ್ಕೊಗೆ ಸಲ್ಲಿಸಿದ ವರದಿಗೆ 'ಸ್ವಪ್ರಜ್ಞೆಯ ಶಿಕ್ಷಣ" ಎಂಬ ಶೀರ್ಷಿಕೆಯನ್ನು ಕೊಟ್ಟದ್ದು ಇದೇ ಕಾರಣಕ್ಕಾಗಿ.

ಶ್ರೀರಾಮಕೃಷ್ಣರ ಬೋಧನೆಗಳಲ್ಲಿ ಸ್ವಪ್ರಜ್ಞೆಯ ಶಿಕ್ಷಣಕ್ಕೆ ಹೆಚ್ಚು ಮಹತ್ವವಿದೆ. ಹೇಗೆ ಧನಾರ್ಜನೆ ಮಾಡಬೇಕು, ಹೇಗೆ ಇತರರೊಡನೆ ಸ್ಪರ್ಧೆಗೆ ಇಳಿಯಬೇಕು, ಹೇಗೆ ಮೊಕದ್ದಮೆಯನ್ನು ಗೆಲ್ಲಬೇಕು ಎಂಬುದನ್ನು ಶ್ರೀರಾಮಕೃಷ್ಣರು ಬೋಧಿಸಲಿಲ್ಲ. ಒಬ್ಬ ವ್ಯಕ್ತಿಯು ತನ್ನ ನೈಜ ಸ್ವರೂಪವನ್ನು – ಇದು ಪರಮಾತ್ಮನ ಅಥವಾ ಭಗವಂತನ ಸ್ವರೂಪಕ್ಕಿಂತ ಭಿನ್ನವಲ್ಲ – ಹೇಗೆ ಅರಿಯುವುದು ಎಂಬುದನ್ನು ಮಾತ್ರ ಬೋಧಿಸಿದರು. ಭಗವಂತನ ಸಾಕ್ಷಾತ್ಕಾರ ಅಂದರೆ ತನ್ನಲ್ಲಿ ಅಂತಸ್ಥವಾಗಿರುವ ದೈವೀ ಸ್ವರೂಪವನ್ನು ಅರಿಯುವುದು. ಇದೇ ಶ್ರೀರಾಮಕೃಷ್ಣರ ಬೋಧನೆಗಳ ಕೇಂದ್ರಬಿಂದುವಾಗಿದೆ.

**ಆಧ್ಯಾತ್ಮಿಕತೆ:** ಆತ್ಮಸಿದ್ಧಿಯೇ ಆಧ್ಯಾತ್ಮಿಕತೆಯ ಅಥವಾ ಅಧ್ಯಾತ್ಮ ಜೀವನದ ಮೂಲಮಂತ್ರ. ಜಗತ್ತಿನ ಅನೇಕ ಭಾಗಗಳಲ್ಲಿ, ಜಾಗತಿಕ ಚಿಂತನೆಯ ಹಾಗೂ ಸಾಮಾಜಿಕ ಜೀವನದ ಪ್ರಮುಖ ಆಶಯವಾಗಿ ಆಧ್ಯಾತ್ಮಿಕತೆಯಲ್ಲಿ ಆಸಕ್ತಿಯು ಈಗ ತೋರಿಬರುತ್ತಿದೆ. ಪ್ರಾಪಂಚಿಕತೆ ಮತ್ತು ಅನಿರ್ಬಂಧಿತ ಸುಖಲೋಲುಪತೆಗಳಿಗೆ ಹಾತೊರೆದು ಭ್ರಾಂತಿಗೊಂಡ ಅನೇಕ ಜನರು ಆಧ್ಯಾತ್ಮಿಕತೆಯತ್ತ ಮುಖಮಾಡಿದ್ದಾರೆ. ನಗರಜೀವನಕ್ಕಾಗಿ ಹೆಚ್ಚುತ್ತಿರುವ ಒಲವು, ಯಶಸ್ಸಿಗಾಗಿ ಪೈಪೋಟಿ, ಉದ್ಯೋಗದಲ್ಲಿ ಬಿಗಿಗೊಳ್ಳುತ್ತಿರುವ ಅರ್ಹತೆಗಳು, ಆರ್ಥಿಕ ಮುಗ್ಗಟ್ಟು, ಕೌಟುಂಬಿಕ ಜೀವನದ ವಿಚ್ಛಿದ್ರತೆ ಮತ್ತು ಇನ್ನಿತರ ಅಂಶಗಳು ಕೂಡಿ, ಮಾನವನ ಜೀವನ ಇಂದಿನ ಕಾಲದಲ್ಲಿ ಅತೀವ ಒತ್ತಡಕ್ಕೆ ಒಳಗಾಗಿದೆ. ಒತ್ತಡ, ಖಿನ್ನತೆ ಮುಂತಾದ ಸಮಸ್ಯೆಗಳಿಂದ ಪಾರಾಗಲು ಆಧ್ಯಾತ್ಮಿಕ ದೃಷ್ಟಿ ಮತ್ತು ಆಧ್ಯಾತ್ಮಿಕ ತಂತ್ರಗಳಾದ ಧ್ಯಾನ, ಜಪ ಮುಂತಾದವು ಅವಶ್ಯಕ ಎಂಬ ಅರಿವು ಈಗ ಬೆಳೆಯುತ್ತಿದೆ.

ಮನೋವಿಜ್ಞಾನಿಗಳು, ನರವಿಜ್ಞಾನಿಗಳು, ತತ್ತ್ವಜ್ಞಾನಿಗಳು ಮತ್ತು ಕ್ವಾಂಟಮ್ ಭೌತಶಾಸ್ತ್ರಜ್ಞರು ನಡೆಸುತ್ತಿರುವ ಪ್ರಜ್ಞೆಯ ಮೇಲಿನ ಸಂಶೋಧನೆಗಳು ಮತ್ತು ಅಧ್ಯಯನಗಳು ಆಧ್ಯಾತ್ಮಿಕ ಜೀವನಕ್ಕೆ ಬೆಂಬಲ ನೀಡುತ್ತಿವೆ. ಇದರ ಫಲವಾಗಿ ಈಗ ಆಧ್ಯಾತ್ಮಿಕತೆಯು, ಜೀವನದ ಬಗ್ಗೆ ಹೊಸ ಮನೋಭಾವನೆ, ಹೊಸ ಜೀವನಪಥ ಹಾಗೂ ಜೀವನಕ್ಕೆ ಅರ್ಥ ಮತ್ತು ಸಫಲತೆಗಳನ್ನು ಕೊಡುವ ಹೊಸ ಸಾಧನವೂ ಆಗಿದೆ. ಆಧ್ಯಾತ್ಮಿಕತೆಯು ಈಗ ಎಂ.ಬಿ.ಎ. ಶಿಕ್ಷಣದ ಪಠ್ಯಕ್ರಮದಲ್ಲಿ ಒಂದು ಭಾಗವಾಗಿದೆ. ವ್ಯಾಪಾರಿಗಳು, ಮಾರಾಟ

ಗಾರರು, ವಕೀಲರು, ವೈದ್ಯರು ಮತ್ತು ಜೀವನದ ನಾನಾ ವೃತ್ತಿಗಳಲ್ಲಿರುವ ಜನರು ಆಧ್ಯಾತ್ಮಿಕತೆಗೆ ಒಲವು ತೋರಿಸುತ್ತಿದ್ದಾರೆ. ಹೀಗಾಗಿ ಪರಿಸರವಿಜ್ಞಾನದಂತೆ ಆಧ್ಯಾತ್ಮಿಕತೆಯೂ ಶಾಲಾಕಾಲೇಜುಗಳಲ್ಲಿ ಅಧ್ಯಯನದ ಮುಖ್ಯ ವಿಷಯವಾಗುವ ಕಾಲ ದೂರವೇನಿಲ್ಲ.

ಈಗ ಜಗತ್ತಿನೆಲ್ಲೆಡೆ ನಡೆಯುತ್ತಿರುವ ಆಧ್ಯಾತ್ಮಿಕ ಆಂದೋಲನವು ಮೂಲತಃ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಪ್ರಭಾವದಿಂದಲೇ ಆರಂಭವಾಯಿತೆಂಬುದು ಬಹುಜನರಿಗೆ ತಿಳಿದಿಲ್ಲ. ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಆದರ್ಶವನ್ನು ಪುನರ್ ಸ್ಥಾಪಿಸಿದುದಲ್ಲದೆ, ಆಧ್ಯಾತ್ಮಿಕತೆಯ ಪುನರುಜ್ಜೀವನ ಕಾರ್ಯವನ್ನು ಕೂಡ ಆರಂಭಿಸಿದರು. ಸ್ವಾಮಿ ವಿವೇಕಾನಂದರು ಎಲ್ಲ ಧರ್ಮಗಳಲ್ಲಿಯೂ ಸಾಮಾನ್ಯವಾಗಿ ಇರುವ ಸಾರ್ವತ್ರಿಕ ಅಧ್ಯಾತ್ಮಸತ್ಯಗಳನ್ನು ಮತ್ತು ತತ್ತ್ವಗಳನ್ನು ಬೇರ್ಪಡಿಸಿ, ಒಂದು ಜಾಗತಿಕ ಆಧ್ಯಾತ್ಮಿಕ ಆಂದೋಲನಕ್ಕೆ ಅಡಿಪಾಯ ಹಾಕಿದ್ದಾರೆ.

ಇದನ್ನೇ ಈಗ 'ಬೌದ್ಧಿಕ ಆಧ್ಯಾತ್ಮಿಕತೆ' ಎಂದು ಕರೆಯಲಾಗುತ್ತಿದೆ. ಬಹುಮಂದಿ ಆಧ್ಯಾತ್ಮಿಕ ಗುರುಗಳಿಂದಲೂ, ಮಾಹಿತಿ – ಸಂಪರ್ಕ ಮತ್ತು ತಂತ್ರಜ್ಞಾನದ ಕ್ರಾಂತಿಯಿಂದಲೂ ಇದಕ್ಕೆ ಬೆಂಬಲ ಸಿಕ್ಕಿ, ಈ 'ಬೌದ್ಧಿಕ ಆಧ್ಯಾತ್ಮಿಕತೆ'ಯು 'ಜಾಗತಿಕ ಆಧ್ಯಾತ್ಮಿಕತೆ' ಯಾಗಿ ರೂಪುಗೊಳ್ಳುತ್ತಾ, ಜಗತ್ತಿನ ಎಲ್ಲ ಜನರಿಗೂ ಈಗ ಲಭ್ಯವಾಗಿದೆ.

**ಪ್ರಮಾಣೀಕರಣದ ನಿಯಮಗಳು:** ಆಧುನಿಕ ಯುಗದಲ್ಲಿ ವಿಜ್ಞಾನದೆಡೆಗೆ ಕಾಣುವ ಬಲವಾದ ಆಕರ್ಷಣೆಗೆ ಪ್ರಮುಖ ಕಾರಣವೆಂದರೆ ವೈಜ್ಞಾನಿಕ ಸತ್ಯಗಳನ್ನು ಪ್ರಯೋಗದ ಮೂಲಕ ಪ್ರಮಾಣೀಕರಿಸಬಹುದಾಗಿದೆ ಎಂಬ ವಾಸ್ತವಿಕ ವಿಚಾರ. ಹಾಗೆ ನೋಡಿದರೆ ಧರ್ಮವು ಒಂದು ಸಿದ್ಧಾಂತದ ನಂಬಿಕೆಯ ಮೇಲೆ, ಹಲವು ಬಾರಿ ಪುರಾಣ ಸಾಹಿತ್ಯದ ಮೇಲಿನ ನಂಬುಗೆಯ ಮೇಲೆ ಆಧಾರಿತವಾಗಿದೆಯೆಂಬುದು ಸಾಮಾನ್ಯ ಜನರ ಅಭಿಪ್ರಾಯ. ಆದರೆ ಶ್ರೀರಾಮಕೃಷ್ಣರು ಧಾರ್ಮಿಕ ಸತ್ಯಗಳನ್ನು ನೇರವಾದ ಅನುಭವದ ಮೂಲಕ ಪ್ರಮಾಣೀಕರಿಸಬಹುದೆಂದು ತೋರಿಸಿಕೊಟ್ಟರು. ನಾನಾ ಧರ್ಮಗಳ ಆಧ್ಯಾತ್ಮಿಕ ಸಾಧನೆಗಳನ್ನು ಅನುಷ್ಠಾನಕ್ಕೆ ತಂದು ಎಲ್ಲ ಧರ್ಮಗಳ ಅಂತಿಮ ಸತ್ಯದ ದರ್ಶನ ಪಡೆಯುವ ಮೂಲಕ, ಶ್ರೀರಾಮಕೃಷ್ಣರು ಕೆಲವು ಮುಖ್ಯ ವಿಶ್ವಧರ್ಮಗಳ ಸಿದ್ಧಾಂತಗಳನ್ನು ಸ್ಥಿರೀಕರಿಸಿದರು.

ಆಧುನಿಕ ಜಗತ್ತಿನಲ್ಲಿ ಶಿಕ್ಷಣವು ವಿಜ್ಞಾನದಿಂದ ಗಾಢವಾಗಿ ಪ್ರಭಾವಿತವಾಗಿದೆ. ವಿಜ್ಞಾನದ ಮೂಲತತ್ತ್ವಗಳನ್ನು ಪ್ರಯೋಗದ ಮೂಲಕ ಪ್ರಮಾಣೀಕರಿಸಬಹುದಾದ್ದರಿಂದ ಯುವಕರಿಗೆ ವಿಜ್ಞಾನದ ಮೇಲೆ ನಂಬಿಕೆ ಇದೆ. ಪಾರಂಪರಿಕ ಧರ್ಮಗಳ ಮೇಲೆ ಹಲವಾರು ಯುವಕರಿಗೆ ನಂಬಿಕೆ ಇಲ್ಲ ಅಥವಾ ಇದ್ದ ನಂಬಿಕೆಯನ್ನೂ ಕಳೆದುಕೊಂಡಿದ್ದಾರೆ. ಶ್ರೀರಾಮಕೃಷ್ಣರ ಪ್ರಮಾಣಿಸಿ ನೋಡುವ ನಿಯಮಗಳು ಯುವಕರಿಗೆ ಧರ್ಮದ ಮೇಲೆ ಪುನಃ ನಂಬಿಕೆ ಬರುವುದಕ್ಕೆ ಸಹಾಯ ಮಾಡೀತು. ಪ್ರಮಾಣಬದ್ಧ, ಪ್ರಯೋಗಶೀಲ ಧರ್ಮದ ಮುಖ್ಯಾಂಶವೇ **'ಆಧ್ಯಾತ್ಮಿಕತೆ.'** ಇದನ್ನೇ ಹಿಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

**ಧರ್ಮಗಳ ಸಮನ್ವಯ:** ಮಕ್ಕಳು ಯಾವುದೇ ಧರ್ಮವನ್ನು ಆಯ್ಕೆ ಮಾಡಿಕೊಳ್ಳಲು ಸ್ವತಂತ್ರರಲ್ಲ; ಒಂದು ನಿರ್ದಿಷ್ಟ ಧರ್ಮವನ್ನು ಅವರ ತಂದೆತಾಯಿಗಳು ಮತ್ತು ಇತರ ಹಿರಿಯರು ಅವರ ಮೇಲೆ ಹೇರುತ್ತಾರೆ. ಹಿರಿಯರು ಇತರ ಧರ್ಮಗಳ ಮೇಲೆ ತಪ್ಪು ಅಥವಾ ನಕಾರಾತ್ಮಕ ದೃಷ್ಟಿಯನ್ನು ಹೊಂದಿದ್ದರೆ, ಮಕ್ಕಳೂ ಸಹ ಹಾಗೆಯೇ ಅದನ್ನು ಅನುಸರಿಸುತ್ತಾರೆ. ಇದರಿಂದಾಗಿಯೇ ಮತೀಯ ಕಲಹಗಳು, ಕೋಮು ಗಲಭೆಗಳು, ಯುವಜನಾಂಗದಲ್ಲಿ ವ್ಯಾಪಕವಾಗಿ ಹರಡುತ್ತಿವೆ.

ಇಚಿದಿನ ದಿನಗಳಲ್ಲಿ ಅಂತರ್ಜಾಲ (Internet) ಮತ್ತು ಜಾಗತೀಕರಣವು ಜಗತ್ತಿನ ಎಲ್ಲ ಜನರನ್ನು ಪರಸ್ಪರ ಹತ್ತಿರ ತರುತ್ತಿದೆ. ಈ ಸಂದರ್ಭದಲ್ಲಿ ಜನರಲ್ಲಿ ಸಾಮರಸ್ಯ ಮತ್ತು ಶಾಂತಿಯನ್ನು ಸ್ಥಾಪಿಸಲು ಇರುವ ಅನೇಕ ಪ್ರತಿಬಂಧಕಗಳಲ್ಲಿ, ಅಂತರ್ಜಾತಿಯ ಕಲಹವೂ ಒಂದು. ಇದರಿಂದ, ಸ್ವಮತ ದುರಭಿಮಾನ ಮತ್ತು ಅಂಧ ಧರ್ಮಶ್ರದ್ಧೆಗಳು ಯುವಕರ ಮೇಲೆ ಪ್ರಭಾವ ಬೀರುವುದನ್ನು ತಪ್ಪಿಸುವಲ್ಲಿ ಒಳ್ಳೆಯ ಧಾರ್ಮಿಕ ಶಿಕ್ಷಣವು ಮುಖ್ಯ ಪಾತ್ರ ವಹಿಸುವುದು. ಯುವಜನತೆಯಲ್ಲಿ ಧಾರ್ಮಿಕ ಸಾಮರಸ್ಯವನ್ನು, ಶಾಂತಿಯನ್ನು ಹರಡಲು ಅಂತಹ ಶಿಕ್ಷಣವು ಪ್ರೋತ್ಸಾಹಿಸುವುದೆಂಬುದನ್ನೂ ನಾವು ಕಂಡುಕೊಳ್ಳಬಹುದು.

ಈ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಪ್ರತಿಪಾದಿಸುತ್ತಿದ್ದ ವಿಶಿಷ್ಟವೂ ಅನುಪಮವೂ ಆದ ಸರ್ವಧರ್ಮಸಮನ್ವಯ ಸಂದೇಶವು ಪ್ರಾಮುಖ್ಯ ಪಡೆಯುತ್ತದೆ. ಹಿಂದೆಯೇ ಹೇಳಿದಂತೆ, ಶ್ರೀರಾಮಕೃಷ್ಣರು, ಎಲ್ಲ ಧರ್ಮಗಳು ಒಂದೇ ಅಂತಿಮ ಗುರಿಯೆಡೆಗೆ ಕರೆದೊಯ್ಯುತ್ತವೆ ಎಂಬ ಸತ್ಯವನ್ನು ಮನಗಾಣಿಸಿದ್ದಾರೆ. ಪ್ರತಿಯೊಬ್ಬರೂ ಅವುಗಳಲ್ಲಿ ಇರುವ ಒಳ್ಳೆಯ ಅಂಶಗಳನ್ನು ಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಿದೆ ಎಂದೂ ಕೂಡ ಅವರು ತಮ್ಮ ಸ್ವಂತ ಜೀವನದ ಮೂಲಕ ತೋರಿಸಿಕೊಟ್ಟಿದ್ದಾರೆ. ಈ ಉದಾರ ಗ್ರಹಿಕೆಯು ಈಗಿನ ಶಿಕ್ಷಣಕ್ಕೆ ಮಾರ್ಗದರ್ಶನ ಮಾಡುವ, ಬೆಳಕು ಚೆಲ್ಲುವ ಸಂಗತಿಯಾಗಬೇಕು. ಭಾರತದ ಬಹುಧರ್ಮೀಯ ಸಮಾಜದಲ್ಲಿ ಶ್ರೀರಾಮಕೃಷ್ಣರ ಸರ್ವಧರ್ಮಸಮನ್ವಯ ಸಂದೇಶವು ಶಾಲಾ ಪಾಠಪ್ರವಚನಗಳಲ್ಲಿ ಅವಶ್ಯವಾದ ಭಾಗವಾಗಬೇಕು.

**ಜೀವನಪಥವಾಗಿ ಸೇವೆ :** ಪ್ರಸ್ತುತ ಜಗತ್ತಿನಲ್ಲಿ ಪ್ರತಿಪಾದನೆಯಾಗುತ್ತಿರುವ ಪ್ರಮುಖ ಸಾಮಾಜಿಕ ಒಲವುಗಳಲ್ಲಿ, ಸಮಾಜದ ದುರ್ಬಲ ಜನರ, ದೈಹಿಕವಾಗಿ ಅಥವಾ ಮಾನಸಿಕವಾಗಿ ಬಳಲುತ್ತಿರುವ ಬುದ್ಧಿವಿಕಲರ ದುರವಸ್ಥೆಯನ್ನು ನಿವಾರಿಸುವ, ನವೀನ